

# ಸುನಿಧಿ ನಟನೆ ಬಯಕೆ

'ಕ್ರೇಜಿ ಕಿಯಾ ರೆ', 'ಶೀಲಾ ಕಿ ಜವಾನಿ', 'ಚೋರ್ ಬಜಾರಿ' ಮುಂತಾದ ಹಿಟ್ ಹಾಡುಗಳ ಮೂಲಕ ಗಾಯಕಿ ಸುನಿಧಿ ಚೌಹಾಣ್ ಮನೆಮಾತು. ಮಾಧುರ್ಯಕ್ಕಿಂತಲೂ ಸದ್ದು ಗದ್ದಲದ, ಐಟಂ ಹಾಡುಗಳಿಂದಲೇ ಸುನಿಧಿ ಹೆಚ್ಚು ಜನಪ್ರಿಯತೆ ಪಡೆದಾಕೆ. ಈಗ ಆಕೆಯಲ್ಲಿ ಅಭಿನಯದ ಆಸೆ ಹುಟ್ಟಿಕೊಂಡಿದೆ.

'ಪ್ಲೇಯಿಂಗ್ ಪ್ರಿಯಾ' ಎಂಬ ಕಿರುಚಿತ್ರದಲ್ಲಿ ಸುನಿಧಿ ಇತ್ತೀಚೆಗೆ ನಟಿಸಿದ್ದಳು. ಅದರ ಅನುಭವ ಆಕೆಯಲ್ಲಿ ಸಿನಿಮಾಗಳಲ್ಲಿ ನಟಿಸುವ ಆಸೆಯನ್ನು ಹುಟ್ಟುಹಾಕಿದೆ.

ಅಂದ ಹಾಗೆ, ಸುನಿಧಿ ನಟನೆಯ ಲೋಕಕ್ಕೆ ಕಾಲಿಡುವ ಅವಕಾಶ 19ರ ಹರೆಯದಲ್ಲಿಯೇ ದೊರಕಿತ್ತು. ಆದರೆ ಆಕೆಯಲ್ಲಿ ಬಯಕೆ ಹುಟ್ಟಿಕೊಂಡಿದ್ದು 32ರ ವಯಸ್ಸಿನಲ್ಲಿ.

'ನಾನು 19ನೇ ವಯಸ್ಸಿನಲ್ಲಿದ್ದಾಗಲೇ ನಟಿಸುವಂತೆ ಅನೇಕ ಅವಕಾಶಗಳು ಬಂದಿದ್ದವು. ಆದರೆ ಒಪ್ಪಿಕೊಂಡಿರಲಿಲ್ಲ. ಏಕೆಂದರೆ ನಟನೆಗೆ ನಾನು ಸಿದ್ಧಳಾಗಿರಲಿಲ್ಲ. ನನ್ನ ಗಮನ ಹಿನ್ನೆಲೆ ಗಾಯನದತ್ತ ಮಾತ್ರ ಇತ್ತು. ಈಗ ಗಾಯನ ಮತ್ತು ನಟನೆ ಎರಡಕ್ಕೂ ಸಮಾನ ಗಮನ ಹರಿಸಲು ನನ್ನಿಂದ ಸಾಧ್ಯ ಎಂಬುದು ಅರಿವಾಗಿದೆ' ಎಂದಿದ್ದಾಳೆ ಸುನಿಧಿ.

ಒಳ್ಳೆಯ ಪಾತ್ರಗಳ ಅವಕಾಶಕ್ಕಾಗಿ ಸುನಿಧಿ ಕಾಯುತ್ತಿದ್ದಾಳಂತೆ. ಅವಕಾಶ ಬಂದಿದೆ ಎಂಬ ಕಾರಣಕ್ಕೆ ನಟಿಸಲು ಆಕೆ ಸಿದ್ಧಳಿಲ್ಲ. ತನಗೆ ಇಷ್ಟವಾಗುವ ಕಥೆ ಬಂದರೆ ಮಾತ್ರ ಆಕೆ ಬಣ್ಣಹಚ್ಚುವುದು. ಸಿನಿಮಾ ಪ್ರಕ್ರಿಯೆ ಗೊತ್ತಿರುವುದರಿಂದ ತನಗೆ ಅದು ಹೊರೆಯಾಗದು. ಅದಕ್ಕೆ ಅಗತ್ಯವಾದ ಪರಿಶ್ರಮ, ಬದ್ಧತೆ, ಸಹನೆ ತನ್ನಲ್ಲಿದೆ ಎಂದು ಹೇಳಿಕೊಂಡಿದ್ದಾಳೆ ಆಕೆ. ಕಿರುಚಿತ್ರದಲ್ಲಿ ನಟಿಸುವಾಗ ಸುನಿಧಿ ಕೊಂಚ ನರ್ವಸ್ ಆಗಿದ್ದಳಂತೆ. ಈಗ ಎಲ್ಲರೂ ಚಿತ್ರ ಹಾಗೂ ತನ್ನ ನಟನೆ ಬಗ್ಗೆ ಮೆಚ್ಚುಗೆ ಮಾತನ್ನಾಡುತ್ತಿರುವುದು ಆಕೆಯಲ್ಲಿ ಆತ್ಮವಿಶ್ವಾಸ ಮೂಡಿಸಿದೆಯಂತೆ. ಇದೊಂದಥರ ಹೊಸ ಗಾಳಿಯನ್ನು ಉಸಿರಾಡುತ್ತಿರುವ ಸಂಭ್ರಮದ ಅನುಭವ ಎಂದಿದ್ದಾಳೆ ಆಕೆ.

■ ಅಮಿ


ಪ್ರಸಿದ್ಧಿಯ ಸೊಬಗಿನ ಸಂಭ್ರಮ

ಶ್ರೀ ವರಮಹಾಲಕ್ಷ್ಮಿ ಬಾರಮ್ಮ



Showrooms @

K.H. Road Ph: 22236613 | M.G. Road Ph: 25580433 | Marathahalli 9448288522/12

Bannerghatta Road Ph: 26689345 | Commercial Street Ph: 25321545 | Domlur Ph: 41511156

Silks, Cotton & Salwars

Prasiddhi® SILKS

A renowned name for well known sarees